ಹತ್ತಾರು ನಿಮಿಷಗಳಲ್ಲೇ ಹಿಂದಿನ ಸೀಟಿನಲ್ಲಿ ಒರಗಿದ್ದ ನನ್ನ ಜತೆಗಾರರು ನಿದ್ರೆಗೆ ಜಾರಿದ್ದರು. ನನಗೂ ಕಣ್ಣುಮುಚ್ಚುತ್ತಿತ್ತಾದರೂ ಚಾಲಕನ ಪಕ್ಕ ಕೂತವರು ನಿದ್ರಿಸಬಾರದೆಂಬ ಎಚ್ಚರದಲ್ಲಿ ಕಷ್ಟಪಟ್ಟು ಕೂತಿದ್ದೆ. ಜತೆಗೆ, ಗೋಪಾಲನ್ ಅವರ ಕಿಟಕಿಯಿಂದ ಒಮ್ಮೆ ಬೀಸಿದ ಗಾಳಿಯಲ್ಲಿ ತೇಲಿಬಂದ ಒಂದು ಕಂಪು, ಅವರು ಸ್ವಲ್ಪ ವಿಶೇಷ ಅರ್ಥದಲ್ಲಿ 'ರೆಸ್ಟ್' ತೆಗೆದುಕೊಂಡಿದ್ದಾರೋ ಎಂಬ ಅನುಮಾನವನ್ನೂ ನನ್ನೊಳಗೆ ಹುಟ್ಟಿಸಿತ್ತು.

ನನ್ನ ಇಂಥ ಮಿಸುಕಾಟಗಳು ಗೋಪಾಲನ್ ಅವರಿಗೂ ತಾಗಿರಬೇಕು – 'ಯಾಕೆ ನಿದ್ರೆ ಬರುತ್ತಿಲ್ಲವಾ?' ಅಂದರು. 'ಇಲ್ಲ, ಈಗಿನ್ನೂ ನೋಡಿಬಂದ ಆ ದೃಶ್ಯಗಳಿಂದ ಹೊರಬರಲಿಕ್ಕೆ ಸ್ವಲ್ಪ ಸಮಯ ಬೇಕು' – ಅಂದೆ. ಗೋಪಾಲನ್ ಮೃದುವಾಗಿ ನಗುತ್ತ, ನನ್ನ ಮುಖ ನೋಡದೆ, ತಮ್ಮಷ್ಟಕ್ಕೆ ತಾವೇ ಎಂಬಂತೆ, ಮಾತಾಡಲು ಆರಂಭಿಸಿದರು – 'ನನಗೆ ಅರ್ಥವಾಗುತ್ತದೆ... ಸಣ್ಣವನಾಗಿದ್ದಾಗಿಂದಲೂ ಈ ದೆಯ್ಯಗಳನ್ನು ನೋಡುತ್ತಲೇ ಬೆಳೆದವನು ನಾನು. ಆದರೂ ಇವತ್ತು ಮತ್ತೊಮ್ಮೆ ತೆಯ್ಯಮ್ ನೋಡಿದರೂ ಮೊದಲ ಸಲ ನೋಡಿದಷ್ಟೇ ಮನಸ್ಸಿಗೆ ತಾಗುತ್ತದೆ. ಯಾಕೆ ಗೊತ್ತಾ? ನಾವೆಲ್ಲ ನಿಜವೆಂದು ಭಾವಿಸಿರುವ ಈ ಲೋಕದಲ್ಲಿ ಎಷ್ಟು ನೆಮ್ಮದಿಯಾಗಿ ಮುಳುಗಿಕೊಂಡಿರುತ್ತೇವೆ ಅಂದರೆ, ಅದರ ಆಚೆಗಿನ ಒಂದು ಝಲಕು ಕಂಡರೂ ಸಾಕು, ನಮ್ಮ ಮನಸ್ಸು ವಿಚಲಿತಗೊಂಡು ಆತಂಕ ಹುಟ್ಟುತ್ತದೆ; ನಮಗೆ ಕಾಣುವ ಈ ಭೌತಿಕದ ಆಚೆಗೂ ಏನೆಲ್ಲ ಇರಬಹುದಲ್ಲ ಅನ್ನಿಸಿ ಭಯವಾಗತೊಡಗುತ್ತದೆ, ಅಲ್ಲವಾ?' ಅಂದರು. ನಾನೇನೂ ಮಾತಾಡಲಿಲ್ಲ.

ಅವರೇ ಮುಂದುವರೆಸಿದರು – 'ಮತ್ತೆ, ಈ ತೆಯ್ಯಮ್ ಪಾತ್ರಿಗಳ ಕಣ್ಣಿನ ನೋಟವನ್ನು ಎದುರಿಸುವುದು ಸುಲಭವಲ್ಲ. ಹುಚ್ಚರು, ಅವಧೂತರು ಮತ್ತು ಪಾತ್ರಿಗಳು – ಈ ಮೂರು ಬಗೆಯ ಮನುಷ್ಯರ ಕಣ್ಣುಗಳಲ್ಲಿ ಒಂದು ವಿಚಿತ್ರ ಶಕ್ತಿಯಿರುವುದನ್ನು ನಾನು ಕಂಡಿದ್ದೇನೆ. ನಮ್ಮ ಸಮಾಧಾನದ ಸರೋವರವನ್ನು ಹೊಕ್ಕು ಅದರೊಳಗಿಂದ ಜೀವಭಯದ ಅಲೆಗಳನ್ನು ಎಬ್ಬಿಸುವ ತಾಕತ್ತು ಅಂಥ ನೋಟಗಳಿಗಿರುತ್ತದೆ. ಮತ್ತೆ ಅಂಥ ಆತಂಕವನ್ನು ಪರಿಹರಿಸಿ ನೆಮ್ಮದಿಯನ್ನು ಕೊಡುವ ತಂಪೂ ಆ ಕಣ್ಣುಗಳಲ್ಲೇ ಇರುತ್ತದೆ. ಆ ಕಣ್ಣುಗಳೇ ಒಂದು ಬಗೆಯ ಮಾಯಾದರ್ಪಣ; ಅದರಿಂದ ಪ್ರತಿಫಲನವಾಗುವ ಬೆಳಕು ನಮ್ಮ ಸಾದಾ ಕಣ್ಣಿನ ಬೆಳಕಿಗೆ ಮಿಶ್ರಗೊಂಡು, ಅವರಿಗೆ ಕಾಣಬಹುದಾದ ವಾಸ್ತವದ ತುಣುಕುಗಳು ನಮಗೂ ಹೊಳೆಯಲಾರಂಭಿಸುತ್ತವೆ. ನಮ್ಮನ್ನು ಲೋಕದಾಚೆಯ ಭಾವಗಳಿಗೆ ಕೊಂಡೊಯ್ದು ಮತ್ತೆ ಸುರಳೀತವಾಗಿ ವಾಪಸು ಕರೆತಂದು ಮುಟ್ಟಿಸುತ್ತವೆ...' ಇತ್ಯಾದಿ ಅವರು ಹೇಳುತ್ತಲೇಹೋದರು. 'ನಿಜ, ನಟರಿಗೂ ಅಂಥ ಮಾಯಾದರ್ಪಣದ ಶಕ್ತಿ ಬಂದರೆ, ಆಗ ನಮ್ಮ ರಂಗಭೂಮಿಗಳಿಗೆ ಬೇರೆಯದೇ ಸಾಮರ್ಥ್ಯ ಹುಟ್ಟಬಹುದಲ್ಲವೆ?' – ಎಂಬೊಂದು ಮಾತು ಇನ್ನೇನು ನನ್ನ ಬಾಯಲ್ಲಿ ಹೊರಡುವುದರಲ್ಲಿತ್ತು; ಆದರೆ, ಈ ಬಗ್ಗೆ ಮಾತು ಮುಂದುವರೆಸುವುದು ಬೇಡವೆನ್ನಿಸಿ, ಹಾಗೇ ನುಂಗಿಕೊಂಡೆ.

ಬದಲು, ವಿಷಯಾಂತರ ಮಾಡಿ ಅವರನ್ನು ಕೇಳಿದೆ – 'ನೀವಾಗ ಉಲ್ಲೇಖ ಮಾಡಿದಿರಲ್ಲ, ಆ ಆದಿಶಂಕರರು ಈ ತೆಯ್ಯಮ್ ಪ್ರದರ್ಶನಗಳನ್ನು ನೋಡಿದ್ದಿರಬಹುದೆ?' ಗೋಪಾಲನ್‌ಗೆ ಈ ಮಾತು ಉತ್ಸಾಹ ಹುಟ್ಟಿಸಿರಬೇಕು; ನಡುನಡುವೆ ನನ್ನ ಮುಖ ನೋಡುತ್ತ ಹಿಂದಿನ ತಮ್ಮ ಉಮೇದಿನಲ್ಲಿಯೇ ಅದಕ್ಕೆ ಪ್ರತಿಕ್ರಿಯಿಸಲು ಆರಂಭಿಸಿದರು – 'ನಾನು ಹೇಳುವ ಮಾತಿಗೆ ಯಾವ ಐತಿಹಾಸಿಕ ಆಧಾರ ಇಲ್ಲ; ಆದರೆ, ಅವರು ಇಂಥ ತೆಯ್ಯಮ್‌ಗಳನ್ನು ನೋಡಿದ್ದರೆಂದೇ ನಾನು ಭಾವಿಸುತ್ತೇನೆ. ಇಡಿಯ ಈ ಕೇರಳ ನಾಡಿನಲ್ಲಿ ಬೇರೆಬೇರೆ ಜಾತಿಯ ನಾನ್ನೂರು ಚಿಲ್ಲರೆ ತೆಯ್ಯಮ್‌ಗಳು ಇದ್ದಾವೆ. ಅವರೂರಿನ ಸಮೀಪ ಇದ್ದ, ಇಂಥದೇ ಒಂದು ತೆಯ್ಯಮ್‌ನ ಎಂಟನೆಯ ಶತಮಾನದ ಆವೃತ್ತಿಯನ್ನು ಅವರು ನೋಡಿರಲಿಕ್ಕೇ ಬೇಕು. ಅವರ "ಸೌಂದರ್ಯಲಹರಿ" ಓದಿದರೆ, ಪ್ರಾಯಶಃ ಅವರು ಭಗವತಿ